2017 ಕ.ತೀ.ವ 438

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

### ಶ್ರೀ ರಂಗೇಗೌಡ –ವಿರುದ್ಧ– ವಿಭಾಗೀಯ ನಿಯಂತ್ರಕರು, ಕೆಎಸ್‌ಆರ್‌ಟಿಸಿ, ಹಾಸನ ವಿಭಾಗ*

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ಕೈಗಾರಿಕಾ ನ್ಯಾಯಾಧಿಕರಣವು ಪರಾಮರ್ಶನವನ್ನು ತಿರಸ್ಕರಿಸಿ ಹೊರಡಿಸಿದ ಐತೀರ್ಪನ್ನು ರದ್ದುಗೊಳಿಸುವಂತೆ ಕೋರಿ ಕಾರ್ಮಿಕನಿಂದ ಸದರಿ ರಿಟ್ ಅರ್ಜಿ ಸಲ್ಲಿಕೆ.**

**ಕಾಲವಿಳಂಬಕ್ಕೆ ಸಂಬಂಧಿಸಿದ್ದಂತೆ ಕಾರ್ಮಿಕನು ತನ್ನ ವಿವರಣಾ ಪಟ್ಟಿಯಲ್ಲಾಗಲೀ ಅಥವಾ ತನ್ನ ಸಾಕ್ಷ್ಯದಲ್ಲಾಗಲೀ ಯಾವುದೇ ಹೇಳಿಕೆಯನ್ನು ನೀಡಿಲ್ಲದ ಕಾರಣ ಕೈಗಾರಿಕಾ ನ್ಯಾಯಾಧಿಕರಣವು ಪರಾಮರ್ಶನವನ್ನು ಕಾಲವಿಳಂಬದ ಆಧಾರದ ಮೇಲೆ ತಿರಸ್ಕರಿಸಿ ಹೊರಡಿಸಿದ ಐತೀರ್ಪನ್ನು ಎತ್ತಿ ಹಿಡಿದ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾದಲ್ಲಿ*** |
|---|---|
| *1. ಎಐಆರ್ 2000 ಎಸ್‌ಸಿ 839 ನೆಡುಂಗಡಿ ಬ್ಯಾಂಕ್ ಲಿಮಿಟೆಡ್ –ವಿರುದ್ಧ– ಕೆ.ಪಿ. ಮಾಧವನ್‌ಕುಟ್ಟಿ ಮತ್ತು ಇತರರು* | *(ಉಲ್ಲೇ) 5* |
| *2. 2009 (13) ಎಸ್‌ಸಿಸಿ 746 ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು –ವಿರುದ್ಧ– ರವಿ ಕುಮಾರ್* | *(ಉಲ್ಲೇ) 5* |

*ರಿಟ್ ಅರ್ಜಿ ಸಂಖ್ಯೆ: 28307/2014 (ಎಲ್–ಕೆಎಸ್‌ಆರ್‌ಟಿಸಿ), ದಿನಾಂಕ: 18ನೇ ಜನವರಿ, 2017.

*3. (2015) 15 ಎಸ್‌ಸಿಸಿ 1*
*ಪ್ರಭಾಕರ್ –ವಿರುದ್ಧ– ಜಂಟಿ ನಿರ್ದೇಶಕರು,*
*ರೇಷ್ಮೆ ಇಲಾಖೆ ಮತ್ತು ಇನ್ನೊಬ್ಬರು (ಉಲ್ಲೇ) 14*

ಅರ್ಜಿದಾರರ ಪರ: ಶ್ರೀ ಎಸ್.ಬಿ. ಮುಕ್ಕಣ್ಣಪ್ಪ, ವಕೀಲರು ಇವರ ಪರವಾಗಿ ಶ್ರೀ ಜಿ.ಎಸ್. ನವೀನ್ ಕುಮಾರ್, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀಮತಿ ಎಚ್.ಆರ್. ರೇಣುಕ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ :**

ದಿನಾಂಕ 15.9.1995ರ ವಿವಾದಾಂಶ ಸಂಖ್ಯೆ. 4(2)(4)ಕ್ಕೆ ಸಂಬಂಧಿಸಿದ ಅಭಿಪ್ರಾಯ ಕೋರಿಕೆಯನ್ನು ತಿರಸ್ಕರಿಸಿ, ಮೈಸೂರಿನ ಕೈಗಾರಿಕಾ ನ್ಯಾಯಾಧಿಕರಣದ ಕಡತದಲ್ಲಿನ ಉಲ್ಲೇಖ ಸಂಖ್ಯೆ 127/2005ರಲ್ಲಿ ಮಾಡಲಾದ ದಿನಾಂಕ 28.02.2013ರ ಐತೀರ್ಪನ್ನು ರದ್ದುಪಡಿಸಲು ಸರ್ಶಿಯೋರರಿ ರಿಟ್‌ಗಾಗಿ ಅರ್ಜಿದಾರ ಕಾರ್ಮಿಕನು ಈ ನ್ಯಾಯಾಲಯದ ಮೊರೆ ಹೋಗಿದ್ದಾನೆ.

2. ಅರ್ಜಿದಾರನ ವಾದವೇನೆಂದರೆ, ಅವನು ಪ್ರತ್ಯರ್ಜಿದಾರ ನಿಗಮದಲ್ಲಿ ನಿರ್ವಾಹಕನಾಗಿ ನೇಮಕಗೊಂಡಿರುತ್ತಾನೆ ಮತ್ತು ನಿರ್ವಾಹಕನಾಗಿ ಅವನ ಉದ್ಯೋಗದ ಅವಧಿಯಲ್ಲಿ, ಕೆಲವು ಆರೋಪಗಳ ಮೇಲೆ ದಿನಾಂಕ 15.09.1995ರಂದು ಒಂದು ವೇತನ ಬಡ್ತಿ ಹಂತದಿಂದ ಖಾಯಂ ಆಗಿ ಅವನ ಮೂಲವೇತನವನ್ನು ತಗ್ಗಿಸಲಾಯಿತು. ತರುವಾಯ, ದಿನಾಂಕ 30.12.2000ದಂದು ಅರ್ಜಿದಾರನ ಮೂಲವೇತನವನ್ನು ಐದು ವರ್ಷಗಳಿಗಾಗಿ, ಒಂದು ವೇತನ ಬಡ್ತಿ ಹಂತದಿಂದ ತಗ್ಗಿಸಲಾಯಿತು. ದಿನಾಂಕ 11.01.2002ರಂದು ಮತ್ತೊಮ್ಮೆ ಅರ್ಜಿದಾರನ ಮೂಲ ವೇತನವನ್ನು ಎರಡು ವೇತನಬಡ್ತಿ ಹಂತಗಳಿಂದ ಖಾಯಂ ಆಗಿ ತಗ್ಗಿಸಲಾಯಿತು ಮತ್ತು ದಿನಾಂಕ 06.11.2002ರಂದು ನಾಲ್ಕು ವೇತನ ಬಡ್ತಿಗಳನ್ನು ಖಾಯಂ

ಆಗಿ ಅರ್ಜಿದಾರನ ಮೂಲ ವೇತನದಿಂದ ತಗ್ಗಿಸಲಾಯಿತು. ಆದುದರಿಂದ, ಅವನು ಸಂಧಾನಾಧಿಕಾರಿಯ ಮುಂದೆ ವಿವಾದವನ್ನು ಎತ್ತಿದ್ದಾನೆ. ಸಂಧಾನ ವ್ಯವಹರಣೆಗಳು ವಿಫಲವಾದದ್ದರಿಂದ, ವಿಷಯವನ್ನು 2005ರ ವರ್ಷದಲ್ಲಿ ಕೈಗಾರಿಕಾ ನ್ಯಾಯಾಧಿಕರಣಕ್ಕೆ ಕಳುಹಿಸಲಾಯಿತು. ಕೈಗಾರಿಕಾ ನ್ಯಾಯಾಧಿಕರಣವು ಸಂಬಂಧಿತ ವಿಷಯದ ನ್ಯಾಯ ನಿರ್ಣಯದ ನಂತರ, ದಿನಾಂಕ 28.02.2013ರ ಪ್ರಶ್ನಿತ ಐತೀರ್ಪಿನ ಮೂಲಕ ಅಭಿಪ್ರಾಯ ಕೋರಿಕೆಯನ್ನು ತಿರಸ್ಕರಿಸಿತು. ಆದುದರಿಂದ, ಸದ್ಯದ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

3. ದಾವೆಯ ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ.

4. ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಎಸ್.ಬಿ. ಮುಕ್ಕಣ್ಣಪ್ಪನವರ ಪರವಾಗಿ ಮಾನ್ಯ ವಕೀಲ ಶ್ರೀ ಜಿ.ಎಸ್. ನವೀನ್‌ಕುಮಾರ್‌ರವರು, ನ್ಯಾಯಾಧಿಕರಣವು, ಮೊಕದ್ದಮೆಯ ಗುಣಾವಗುಣಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ವಿಳಂಬ ಹಾಗೂ ಕರ್ತವ್ಯಲೋಪಗಳ ಆಧಾರದ ಮೇಲೆ ಮಾತ್ರ ಅಭಿಪ್ರಾಯ ಕೋರಿಕೆಯನ್ನು ತಿರಸ್ಕರಿಸಲು ಮುಂದಾಗಿದೆಯೆಂದು ಭಾವಾವೇಶದಿಂದ ವಾದಿಸಿದ್ದಾರೆ. ಅವರು ಮುಂದುವರೆದು, ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ (ಸಂಕ್ಷಿಪ್ತವಾಗಿ 'ಅಧಿನಿಯಮ') 10(1)(ಡಿ) ಪ್ರಕರಣದ ಉಪಬಂಧಗಳಡಿ ವಿವಾದವನ್ನು ಎತ್ತಲು ನಿಗದಿತ ಪರಿಮಿತಿಯೇನಿಲ್ಲವೆಂದು ವಾದಿಸಿದ್ದಾರೆ. ನ್ಯಾಯಾಧಿಕರಣವು ಮುಖ್ಯವಾಗಿ ವಿಳಂಬ ಹಾಗೂ ಕರ್ತವ್ಯಲೋಪಗಳ ಆಧಾರದ ಮೇಲೆ ಅಭಿಪ್ರಾಯ ಕೋರಿಕೆಯನ್ನು ತಿರಸ್ಕರಿಸುವ ಬದಲಿಗೆ ಮೊಕದ್ದಮೆಯ ಗುಣಾರ್ಹತೆಗಳನ್ನು ಪರಿಶೀಲಿಸಬೇಕಾಗಿತ್ತು ಎಂದು ಅವರು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು ಬೇರೆ ಬೇರೆ ದಿನಾಂಕಗಳಂದು ಪ್ರತ್ಯರ್ಜಿದಾರನು ಹೊರಡಿಸಿದ ಇನ್ನಿತರ ಮೂರು ಶಿಕ್ಷೆಯ ಆದೇಶಗಳನ್ನು, ಅವುಗಳನ್ನು ನ್ಯಾಯನಿರ್ಣಯಕ್ಕಾಗಿ ಒಪ್ಪಿಸಲಾಗಿದ್ದರೂ, ನ್ಯಾಯಾಧಿಕರಣವು ಪರಿಗಣಿಸಿರುವುದಿಲ್ಲವೆಂದು ವಾದಿಸಿದ್ದಾರೆ. ಆದುದರಿಂದ, ಅವರು ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಐತೀರ್ಪನ್ನು ಬದಿಗಿರಿಸಲು ಕೋರಿದ್ದಾರೆ.

5. ಇದಕ್ಕೆ, ವಿರುದ್ಧವಾಗಿ, ಪ್ರತ್ಯರ್ಜಿದಾರ ನಿಗಮದ ಪರ ಮಾನ್ಯ ವಕೀಲರಾದ ಶ್ರೀಮತಿ ಎಚ್.ಆರ್. ರೇಣುಕರವರು, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ಐತೀರ್ಪನ್ನು ಸಮರ್ಥಿಸಲು ಮತ್ತು ನ್ಯಾಯಾಧಿಕರಣವು ದಿನಾಂಕ 15.09.1995ರ ವಿವಾದಾಂಶ 4(2) (4)ಕ್ಕೆ ಸಂಬಂಧಿಸಿದ ಅಭಿಪ್ರಾಯ ಕೋರಿಕೆಯನ್ನು ಮಾತ್ರ ನ್ಯಾಯ ನಿರ್ಣಯ ಮಾಡಿದೆಯೆಂಬುದನ್ನು ಎತ್ತಿ ತೋರಿಸಿದ್ದಾರೆ. ದಿನಾಂಕ 30.12.2000, 11.01.2002 ಹಾಗೂ 6.11.2002ರ ಇತರ ಮೂರು ಶಿಕ್ಷೆಯ ಆದೇಶಗಳಿಗೆ ಸಂಬಂಧಿಸಿದಂತೆ, ಸದರಿ ಶಿಕ್ಷೆಯ ಆದೇಶಗಳನ್ನು ಪ್ರತ್ಯೇಕವಾಗಿ ಪ್ರಶ್ನಿಸಲು ಕಾರ್ಮಿಕನಿಗೆ ಸ್ವಾತಂತ್ರ್ಯವಿದ್ದು, ಅದು ಕಾನೂನು ಪ್ರಕಾರ ಸಮರ್ಥನೀಯವಲ್ಲದ ಕಾರಣ ಅವುಗಳನ್ನು ನ್ಯಾಯಾಧಿಕರಣವು 06.06.2012ರ ಆದೇಶದ ಮೂಲಕ ವಜಾ ಮಾಡಿದೆ. ಅಷ್ಟೇ ಅಲ್ಲದೆ, ನ್ಯಾಯಾಧಿಕರಣವು, ದಾಖಲೆಯಲ್ಲಿನ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ವಿವಾದವನ್ನು ಎತ್ತುವಲ್ಲಿ ಒಂಬತ್ತು ವರ್ಷಗಳ ಅತಿಯಾದ ವಿಳಂಬಕ್ಕಾಗಿ ಕಾರ್ಮಿಕನು ಯಾವುದೇ ವಿವರಣೆಯನ್ನು ನೀಡಿಲ್ಲವೆಂಬ ನಿರ್ದಿಷ್ಟ ನಿರ್ಣಯವನ್ನು ದಾಖಲಿಸಿದ್ದಾರೆಂದು ಮಾನ್ಯ ವಕೀಲರು ವಾದಿಸಿದ್ದಾರೆ. ಆದುದರಿಂದ ಅವರು ರಿಟ್ ಅರ್ಜಿಯನ್ನು ವಜಾ ಮಾಡಲು ಕೋರಿದ್ದಾರೆ. ವಿಳಂಬಕ್ಕೆ ಸಂಬಂಧಿಸಿದಂತೆ ತಮ್ಮ ವಾದದ ಸಮರ್ಥನೆಗಾಗಿ, ಮಾನ್ಯ ವಕೀಲರು ***ನೆಡುಂಗಡಿ ಬ್ಯಾಂಕ್ ಲಿಮಿಟೆಡ್ –ವಿರುದ್ಧ– ಕೆ.ಪಿ. ಮಾಧವನ್‌ಕುಟ್ಟಿ ಮತ್ತು ಇತರರು***[1] ಪ್ರಕರಣದಲ್ಲಿ ಹಾಗೂ ವರದಿಯಾದ ***ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು –ವಿರುದ್ಧ– ರವಿ ಕುಮಾರ್***[2], ಪ್ರಕರಣದಲ್ಲಿಯೂ ಸಹ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿಸಲು ಕೋರಿದ್ದಾರೆ.

6. ಪಕ್ಷಕಾರರ ಪರ ಮಾನ್ಯ ವಕೀಲರು ಮಂಡಿಸಿದ ಪರಸ್ಪರ ವಿರೋಧದ ವಾದಗಳ ದೃಷ್ಟಿಯಿಂದ ಸದ್ಯದ ರಿಟ್ ಅರ್ಜಿಯಲ್ಲಿ ಪರಿಗಣನೆಗಾಗಿ ಉದ್ಭವಿಸುವ ಏಕೈಕ ವಿವಾದಾಂಶವು ಹೀಗಿದೆ:

---

2. ಎಐಆರ್ 2000 ಎಸ್‌ಸಿ 839 2. 2009 (13) ಎಸ್‌ಸಿಸಿ 746

"ಸದ್ಯದ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ ಅರ್ಜಿದಾರನ ಅಭಿಪ್ರಾಯ ಕೋರಿಕೆಯನ್ನು ತಿರಸ್ಕರಿಸುವಲ್ಲಿ ನ್ಯಾಯಾಧಿಕರಣವು ಸಮರ್ಥನೀಯವಾಗಿದೆಯೇ?"

7. ಪಕ್ಷಕಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದಗಳಿಗೆ ನನ್ನ ತೀವ್ರಾಪೇಕ್ಷೆಯ ಅಭಿಪ್ರಾಯವನ್ನು ನೀಡಿದ್ದೇನೆ ಹಾಗೂ ದಾಖಲೆಯಲ್ಲಿನ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಅವಗಾಹಿಸಿದ್ದೇನೆ.

8. ಅರ್ಜಿದಾರನು ಸದರಿ ನಿಗಮದಲ್ಲಿ ನಿರ್ವಾಹಕನಾಗಿ ನೇಮಕವಾಗಿದ್ದನು ಮತ್ತು ಅವನ ಉದ್ಯೋಗದ ಅವಧಿಯಲ್ಲಿ, ಕೆಲವು ಆರೋಪಗಳ ಮೇಲೆ, ಕಾರ್ಮಿಕನ ಮೂಲ ವೇತನವನ್ನು ದಿನಾಂಕ 15.9.1995ರಂದು ಖಾಯಂ ಆಗಿ ಒಂದು ವೇತನ ಬಡ್ತಿ ಹಂತದಿಂದ ತಗ್ಗಿಸಲಾಗಿರುತ್ತದೆ. ದಿನಾಂಕ 30.12.2000, 11.01.2002 ಮತ್ತು 6.11.2002ರಂದು 3ನೇ ಪ್ರತ್ಯರ್ಜಿದಾರರು ವಿಧಿಸಿದ ಇತರ ಮೂರು ಶಿಕ್ಷೆಗಳಿಗೆ ಸಂಬಂಧಿಸಿದಂತೆ, ನ್ಯಾಯಾಧಿಕರಣವು ಯಾವುವೇ ಆದೇಶಗಳನ್ನು ಹೊರಡಿಸಿಲ್ಲವೆಂದು ಮಾನ್ಯ ವಕೀಲ ಶ್ರೀ ನವೀನ್‌ರವರು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದರೂ, ಐತೀರ್ಪಿನ 3ನೇ ಹಾಗೂ 19ನೇ ಕಂಡಿಕೆಗಳಲ್ಲಿ, ನ್ಯಾಯಾಧಿಕರಣವು ನಿರ್ದಿಷ್ಟವಾಗಿ ತೀರ್ಪನ್ನು ದಾಖಲಿಸಿದೆಯೆಂಬುದನ್ನು ಗಮನಿಸುವುದು ಸೂಕ್ತವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗುತ್ತದೆ:

*"3. ಈ ಉಲ್ಲೇಖವು, ದಿನಾಂಕ 06.11.2002, 11.01.2002, 30.12.2000 ಹಾಗೂ 15.9.1995ರ ನಾಲ್ಕು ಶಿಕ್ಷೆಯ ಆದೇಶಗಳಿಗೆ ಸಂಬಂಧಿಸಿದ್ದಾಗಿದ್ದು, ಅವುಗಳನ್ನು ಅನುಕ್ರಮವಾಗಿ 4(2)(1), 4(2)(2), 4(2)(3) ಮತ್ತು 4(2)(4) ವಿವಾದಾಂಶಗಳಾಗಿ ಉಲ್ಲೇಖಾಂಶಗಳಲ್ಲಿ ಸೂಚಿಸಲಾಗಿದೆ. ದಿನಾಂಕ 06.06.2012ರಂದು, ಈ ನ್ಯಾಯಾಲಯದ ಅಂದಿನ ಅಧ್ಯಕ್ಷಾಧಿಕಾರಿಯು 4(2)(1)ರಿಂದ 4(2)(3)ರ ವರೆಗಿನ ವಿವಾದಾಂಶಗಳಲ್ಲಿ ಉಲ್ಲೇಖಿಸಲಾದ ಶಿಕ್ಷೆಯ ಆದೇಶಗಳಿಗೆ ಸಂಬಂಧಪಟ್ಟಂತೆ ಅವು ಸಮರ್ಥನೀಯವಾಗಿಲ್ಲವೆಂದು, ಆದರೆ*

*ಕಾನೂನು ಪ್ರಕಾರ, ಸದರಿ ಶಿಕ್ಷೆಯ ಆದೇಶಗಳನ್ನು ಪ್ರತ್ಯೇಕವಾಗಿ ಪ್ರಶ್ನಿಸಲು ಮೊದಲನೇ ಪಕ್ಷಕಾರನಿಗೆ ಸ್ವಾತಂತ್ರ್ಯ ನೀಡಿ, ಅಭಿಪ್ರಾಯ ಕೋರಿಕೆಯನ್ನು ವಜಾ ಮಾಡಿ ಆದೇಶ ಹೊರಡಿಸಿದ್ದಾರೆ. ಹಾಗಿದ್ದರೂ, ಸದರಿ ಆದೇಶದಡಿ, ದಿನಾಂಕ 15.09.1995ರ ವಿವಾದಾಂಶ 4(2) (4)ಕ್ಕೆ ಸಂಬಂಧಿಸಿದ ಉಲ್ಲೇಖಾನುಸಾರ ಮುಂದುವರೆಯಲು ಎರಡೂ ಪಕ್ಷಕಾರರಿಗೆ ನಿರ್ದೇಶಿಸಲಾಯಿತು.*

*19. ಮೇಲೆ ಗಮನಿಸಲಾದಂತೆ, ದಿನಾಂಕ 06.06.2012ರ ಆದೇಶದ ಮೂಲಕ, ಈ ನ್ಯಾಯಾಧಿಕರಣವು 4(2)(1)ರಿಂದ 4(2)(3)ರ ವರೆಗಿನ ವಿವಾದಾಂಶಗಳಿಗೆ ಸಂಬಂಧಪಡುವ ಶಿಕ್ಷೆಯ ಆದೇಶಗಳಿಗೆ ಸಂಬಂಧಿಸಿದಂತೆ ಅಭಿಪ್ರಾಯ ಕೋರಿಕೆಯನ್ನು ವಜಾ ಮಾಡಿದೆ. ಹೀಗಾಗಿ, ಈ 4(2)(1)ರಿಂದ 4(2)(3)ರ ವರೆಗಿನ ಅಂಶಗಳು ಈ ನ್ಯಾಯಾಧಿಕರಣದ ನಿರ್ಧಾರಕ್ಕಾಗಿ ಉಳಿಯುವುದಿಲ್ಲ."*

9. ಈ ಮೇಲಿನದರ ದೃಷ್ಟಿಯಿಂದ ನ್ಯಾಯಾಧಿಕರಣವು ದಿನಾಂಕ 15.09.1995ರ ವಿವಾದಾಂಶ ಸಂಖ್ಯೆ 4(2)(4)ಕ್ಕೆ ಸಂಬಂಧಿಸಿದ ಅಭಿಪ್ರಾಯ ಕೋರಿಕೆಗೆ ಸಂಬಂಧಿಸಿದಂತೆ ಮಾತ್ರ ನ್ಯಾಯ ನಿರ್ಣಯ ಮಾಡಲು ಮುಂದಾಗಿದೆಯೆಂದು ಸ್ಪಷ್ಟವಾಗಿದೆ. ನ್ಯಾಯಾಧಿಕರಣವು ಇಡೀ ಕ್ಲೇಮು ಹೇಳಿಕೆಯಲ್ಲಿ ಅಥವಾ ಡಬ್ಲ್ಯೂ ಡಬ್ಲ್ಯೂ–1 ಎಂಬುದಾಗಿ ಪರಿಶೀಲಿಸಲಾದ ಕಾರ್ಮಿಕನ ಸಾಕ್ಷ್ಯದಲ್ಲಿ, ವಿವಾದ ಎತ್ತುವಲ್ಲಿ ಒಂಬತ್ತು ವರ್ಷಗಳ ಅತಿಯಾದ ವಿಳಂಬವಾದ ಬಗ್ಗೆ ಯಾವುದೇ ವಿವರಣೆಯನ್ನು ನೀಡಿಲ್ಲವೆಂದು ನಿರ್ದಿಷ್ಟ ನಿರ್ಣಯವನ್ನು ದಾಖಲಿಸಿದೆ ಹಾಗೂ ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ಈ ಕೆಳಗಿನಂತೆ ನಿರ್ದಿಷ್ಟ ನಿರ್ಣಯವನ್ನು ದಾಖಲಿಸಿದೆ:

*"ನಿಶಾನೆ ಎಂ.48 ಮತ್ತು ನಿಶಾನೆ ಎಂ.49, ದಿನಾಂಕ 15.09.1995ರ ಆದೇಶದ ಮೂಲಕ ಮೊದಲ ಪಕ್ಷಕಾರರಿಗೆ ಶಿಕ್ಷೆಯನ್ನು ವಿಧಿಸಿರುವ ಬಗ್ಗೆ ಉಲ್ಲೇಖವಿದೆ. ಆದರೆ, ನಿಶಾನೆ ಎಂ.47ರ ಅನುಸಾರ, ಸದರಿ*

*ಶಿಕ್ಷೆಯ ಆದೇಶಕ್ಕೆ ಸಂಬಂಧಿಸಿದ ದಾಖಲೆಗಳು ಎರಡನೇ ಪಕ್ಷಕಾರನ ಬಳಿ ಲಭ್ಯವಿಲ್ಲ. ಅದರಂತೆ, ಈ ದಾಖಲೆಗಳು ಎಂ.ಡಬ್ಲ್ಯೂ.3ರ ಸಾಕ್ಷ್ಯವನ್ನು ಸಮರ್ಥಿಸುತ್ತವೆ. ಮೊದಲನೇ ಪಕ್ಷಕಾರನು ಸಾಕ್ಷ್ಯದ ಆಧಾರದ ಮೇಲೆ ತನ್ನನ್ನು ಪಾಟೀ ಸವಾಲು ಮಾಡಲು ಇಚ್ಛಿಸಿಲ್ಲವಾದ ಕಾರಣ, ಎಂ.ಡಬ್ಲ್ಯೂ.3ರ ಸದರಿ ಸಾಕ್ಷ್ಯವು ಪ್ರಶ್ನಿತವಾಗದೆ ಉಳಿದಿದೆ. ಎಂ.ಡಬ್ಲ್ಯೂ.3ರ ಸಾಕ್ಷ್ಯವನ್ನು ನಂಬದಿರಲು ಯಾವುದೇ ಕಾರಣವಿಲ್ಲದಿದ್ದು, ಅದನ್ನು ನಿಶಾನೆ ಎಂ.47ರಿಂದ ನಿಶಾನೆ ಎಂ.49ರವರೆಗೆ ಚೆನ್ನಾಗಿ ಸಮರ್ಥಿಸಲಾಗಿದೆ. ಸದರಿ ಸಾಕ್ಷ್ಯದಿಂದ, ವಿವಾದವನ್ನು ಎತ್ತುವಲ್ಲಿ ಆದ ಸಮಯದ ಕೊರತೆ ಮತ್ತು ವಿಳಂಬದ ಕಾರಣದಿಂದಾಗಿ ಎರಡನೇ ಪಕ್ಷಕಾರನು ಈ ವಿವಾದದಲ್ಲಿ ಪ್ರಶ್ನೆಯ ಅಡಿಯಲ್ಲಿ ಶಿಕ್ಷೆಯ ಆದೇಶಕ್ಕೆ ಸಂಬಂಧಿಸಿದಂತೆ ಮೌಲ್ಯಯುತ ಸಾಕ್ಷ್ಯವನ್ನು ಕಳೆದುಕೊಂಡಿದ್ದಾನೆ ಎಂಬುದು ಸ್ಪಷ್ಟವಾಗಿದೆ.”*

10. ಆಪಾದಿಸಲಾದ ಘಟನೆಯು 07.03.1995ರಂದು ನಡೆದಿದೆ ಮತ್ತು ಕಾರ್ಮಿಕನ ಉದಾಹರಣೆಯಲ್ಲಿ, ಸರ್ಕಾರವು ವಿವಾದವನ್ನು ನ್ಯಾಯನಿರ್ಣಯಕ್ಕಾಗಿ 2005ರ ವರ್ಷದಲ್ಲಿ ಒಪ್ಪಿಸಿದೆ ಮತ್ತು ಅಧಿವಿಚಾರಣೆಯನ್ನು 2007ರ ವರ್ಷದಲ್ಲಿ ಪ್ರಾರಂಭಿಸಲಾಗಿದ್ದು, ಅದರಂತೆ, ವಾಸ್ತವಿಕವಾಗಿ ವಿವಾದವು 12 ವರ್ಷಗಳಿಗಿಂತ ಹೆಚ್ಚು ಹಿಂದಿನದಾಗಿದೆ ಹಾಗೂ ಆ ಕಾರಣದಿಂದ ವಿವಾದಕ್ಕೆ ಸಂಬಂಧಿಸಿದ ಸಾಕ್ಷ್ಯ, ಆಡಳಿತ ವರ್ಗದ ಬಳಿ ಲಭ್ಯವಿಲ್ಲವೆಂದೂ ಸಹ ನ್ಯಾಯಾಧಿಕರಣವು ಅಭಿಪ್ರಾಯಪಟ್ಟಿದೆ ಹಾಗೂ ಆದ್ದರಿಂದ ಅಭಿಪ್ರಾಯ ಕೋರಿಕೆಯನ್ನು ತಿರಸ್ಕರಿಸಿದೆ.

11. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಮೇಲೆ ಹೇಳಿದ ***ನೆಡುಂಗಡಿ ಬ್ಯಾಂಕ್‌ನ*** ಪ್ರಕರಣದಲ್ಲಿ, ವಿವಾದವನ್ನು ಎತ್ತುವಲ್ಲಿ ಆದ ವಿಳಂಬವನ್ನು ಪರಿಗಣಿಸುವಾಗ, ಕಂಡಿಕೆ 6 ರಲ್ಲಿ ಈ ಕೆಳಗಿನಂತೆ ತೀರ್ಮಾನಿಸಿದೆ:

*“6. ಅಧಿನಿಯಮದ 10ನೇ ಪ್ರಕರಣದಡಿ ತನ್ನ ಅಧಿಕಾರಗಳನ್ನು ಚಲಾಯಿಸಲು ಸಮುಚಿತ ಸರ್ಕಾರಕ್ಕೆ ಕಾನೂನು ಯಾವುದೇ*

*ಕಾಲಪರಿಮಿತಿಯನ್ನು ನಿಗದಿಪಡಿಸುವುದಿಲ್ಲ. ಈ ಅಧಿಕಾರವನ್ನು ಯಾವುದೇ ಸಮಯದಲ್ಲಿ ಬೇಕಾದರೂ ಚಲಾಯಿಸಬಹುದು ಎಂದರ್ಥವಲ್ಲ ಮತ್ತು ಇತ್ಯರ್ಥವಾಗಿರುವ ವಿಷಯಗಳನ್ನು ಪುನಃ ಪ್ರಾರಂಭಿಸಲು ಅಧಿಕಾರವನ್ನು ಸಮಂಜಸವಾಗಿ ಹಾಗೂ ವಿವೇಚನಾಯುಕ್ತವಾಗಿ ಚಲಾಯಿಸಬೇಕಿದೆ. ಪ್ರತ್ಯರ್ಜಿದಾರನನ್ನು ಸೇವೆಯಿಂದ ವಜಾಗೊಳಿಸುವ ಆದೇಶವಾಗಿ ಸುಮಾರು ಏಳು ವರ್ಷಗಳು ಕಳೆದುಹೋದ ನಂತರ ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರವು ಚಲಾಯಿಸಿದ ಅಧಿಕಾರಕ್ಕೆ ಯಾವುದೇ ವಿವೇಚನಾತ್ಮಕ ಆಧಾರವಿಲ್ಲ ಎಂದು ನಮಗೆ ಕಂಡು ಬಂದಿರುತ್ತದೆ. ಪರಾಮರ್ಶನ ಮಾಡಿದ ಸಮಯದಲ್ಲಿ ಯಾವುದೇ ಕೈಗಾರಿಕಾ ವಿವಾದ ಉಂಟಾಗಿರಲಿಲ್ಲ ಅಥವಾ ಹಾಗೆ ಅರ್ಥೈಸಲಾಗಿರುವುದಾಗಿಯೂ ಸಹ ಹೇಳಬಹುದು. ಅವಧಿ ಮೀರಿದ ವಿವಾದವು ಅಧಿನಿಯಮದ 10ನೇ ಪ್ರಕರಣದಡಿ ಪರಾಮರ್ಶನದ ವಸ್ತುವಿಷಯವಾಗಲು ಸಾಧ್ಯವಿಲ್ಲ. ಒಂದು ವಿವಾದವು ಅವಧಿ ಮೀರಿದ್ದೆಂದು ಹೇಳಬಹುದಾಗಿದ್ದಾಗ, ಅದು ಆಯಾ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಮೇಲೆ ಅವಲಂಬಿಸಿರುತ್ತದೆ. ವಿಷಯವು ಅಂತಿಮವಾದಾಗ, ಸದ್ಯದ ವಿಷಯದಂತಹ ಸನ್ನಿವೇಶಗಳಲ್ಲಿ, ಅಧಿನಿಯಮದ 10ನೇ ಪ್ರಕರಣದಡಿ ಪರಾಮರ್ಶನವನ್ನು ಮಾಡುವುದೆಂದರೆ ಅದು ಸ್ವಲ್ಪಮಟ್ಟಿಗೆ ಅಸಮಂಜಸವೆಂದು ನಮಗೆ ಕಂಡು ಬಂದಿರುತ್ತದೆ. ವಾಸ್ತವವಾಗಿ, ಪ್ರಶ್ನಿತ ಪರಾಮರ್ಶನವನ್ನು ಮಾಡಿದ್ದ ಸಮಯದಲ್ಲಿ ಯಾವ ವಿವಾದವೂ ಇತ್ಯರ್ಥದಲ್ಲಿರಲಿಲ್ಲವೆಂದು ಹೇಳಬಹುದಾಗಿದೆ. ಸೇವೆಯಿಂದ ವಜಾಮಾಡಲಾದ ಇತರ ಇಬ್ಬರು ನೌಕರರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ ಎಂಬುದು ಪ್ರತ್ಯರ್ಜಿದಾರನು ಮಂಡಿಸಿದ ಏಕೈಕ ಆಧಾರವಾಗಿದೆ. ಯಾವ ಸಂದರ್ಭದಲ್ಲಿ ಅವರನ್ನು ವಜಾ ಮಾಡಲಾಯಿತು ಹಾಗೂ ತರುವಾಯ, ಯಾವ ಸಂದರ್ಭದಲ್ಲಿ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಯಿತು ಎಂಬುದನ್ನು ಎಲ್ಲಿಯೂ ನಮೂದಿಸಿಲ್ಲ. ಕೈಗಾರಿಕಾ ವಿವಾದವನ್ನು ಎತ್ತುವುದಕ್ಕೆ ಪ್ರತ್ಯರ್ಜಿದಾರನು*

*ಮುಂದಿಟ್ಟ ಬೇಡಿಕೆಯು ಸ್ಪಷ್ಟವಾಗಿ ಕಾನೂನು ಸಮ್ಮತವಲ್ಲದ್ದು ಹಾಗೂ ಅಸಮರ್ಥವಾದದ್ದಾಗಿದೆ".*

12. ಸರ್ವೋಚ್ಚ ನ್ಯಾಯಾಲಯವು, **ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು -ವಿರುದ್ಧ- ರವಿ ಕುಮಾರ್**, ಪ್ರಕರಣದಲ್ಲಿ, ವಿವಾದವನ್ನು ಎತ್ತುವಲ್ಲಿ ಆದ ವಿಳಂಬವನ್ನು ಪರಿಗಣಿಸುವಾಗ, 5 ರಿಂದ 10ರ ವರೆಗಿನ ಕಂಡಿಕೆಗಳಲ್ಲಿ ಈ ಕೆಳಗಿನಂತೆ ತೀರ್ಮಾನಿಸಿದೆ:

*"5. 14 ರಿಂದ 15 ವರ್ಷಗಳ ನಂತರ ಮಾಡಲಾಗಿರುವ ಪರಾಮರ್ಶನವು ಅವಧಿ ಮೀರಿದ್ದಾಗಿದೆಯೆಂದು ಏಕೈಕ ಪ್ರತ್ಯರ್ಜಿದಾರರಾದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರು ಇತರ ವಿಷಯಗಳೊಂದಿಗೆ ವಾದಿಸಿದ್ದಾರೆ ಮತ್ತು ಪ್ರತ್ಯರ್ಜಿದಾರನು ತನ್ನ ಕಚೇರಿಯಲ್ಲಿ ಸೇವೆ ಸಲ್ಲಿಸಿದ್ದಾನೆಂಬುದನ್ನು ನಿರಾಕರಿಸಿದ್ದಾರೆ. ಕಾರ್ಮಿಕ ನ್ಯಾಯಾಲಯವು ದಿನಾಂಕ 30.9.2001ರ ತನ್ನ ಐತೀರ್ಪಿನ ಮೂಲಕ ಪರಾಮರ್ಶನವನ್ನು ತಿರಸ್ಕರಿಸಿದೆ. ಹಿಂದಿನ ಯಾವುದೇ ಮಜೂರಿಗಳಿಲ್ಲದೆ ಪ್ರತ್ಯರ್ಜಿದಾರನನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲು ರಾಜ್ಯ ಸರ್ಕಾರಕ್ಕೆ ಮತ್ತು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ನಿರ್ದೇಶಿಸಿ, ದಿನಾಂಕ 23.3.2006ರ ಆದೇಶದ ಮೂಲಕ, ಪ್ರತ್ಯರ್ಜಿದಾರನು ಸಲ್ಲಿಸಿದ ರಿಟ್ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯವು ಬದಿಗಿರಿಸಿದೆ. ಸದರಿ ಆದೇಶವು ವಿಶೇಷ ಅನುಮತಿಯಿಂದ ಈ ಅಪೀಲಿನಲ್ಲಿ ಪ್ರಶ್ನಿತವಾಗಿದೆ.*

6. ಅವಧಿ ಮೀರಿದ ಕ್ಲೇಮುಗಳನ್ನು ನೆಡುಂಗಡಿ ಬ್ಯಾಂಕ್ ಲಿಮಿಟೆಡ್ -ವಿರುದ್ಧ- ಕೆ.ಪಿ. ಮಾಧವನ್ ಕುಟ್ಟಿ ಮತ್ತು ಕಾರ್ಯ ನಿರ್ವಾಹಕ ಇಂಜಿನಿಯರ್ -ವಿರುದ್ಧ- ಶಿವಲಿಂಗ ಪ್ರಕರಣದಲ್ಲಿರುವಂತೆ ಉಲ್ಲೇಖಿಸತಕ್ಕದ್ದಲ್ಲ. ರೀಜನಲ್ ಪ್ರಾವಿಡೆಂಟ್ ಫಂಡ್ ಕಮಿಷನರ್ -ವಿರುದ್ಧ- ಕೆ.ಟಿ. ರೋಲಿಂಗ್ ಮಿಲ್ಸ್ (ಪ್ರೈ) ಲಿಮಿಟೆಡ್

ಪ್ರಕರಣದಲ್ಲಿನ ತೀರ್ಪನ್ನು ಸಹ ನಾನು ಉಲ್ಲೇಖಿಸಬಹುದು ಅದರಲ್ಲಿ ಈ ನ್ಯಾಯಾಲಯವು ಈ ಮುಂದಿನಂತೆ (ಎಸ್‌ಸಿಸಿ ಪಿ 182, ಕಂಡಿಕೆ 4) ಅಭಿಪ್ರಾಯಪಟ್ಟಿದೆ:

> *"4. ಅಧಿಕಾರವನ್ನು, ಅದನ್ನು ಕೋರಿರಬಹುದಾದ ಅವಧಿಯನ್ನು ತಿಳಿಸದೆ, ಶಾಸನದಿಂದ ಪ್ರದತ್ತಗೊಳಿಸಿದಾಗ ಎಲ್ಲಾ ಅಧಿಕಾರಗಳನ್ನು ಸಮಂಜಸವಾಗಿ ಚಲಾಯಿಸಬೇಕಾದ ಕಾರಣ ಅದನ್ನು ಸಮಂಜಸವಾದ ಅವಧಿಯೊಳಗೆ ಚಲಾಯಿಸಬೇಕಿರುತ್ತದೆ ಹಾಗೂ ಅದನ್ನು ಸೂಕ್ತ ಅವಧಿಯಲ್ಲಿ ಚಲಾಯಿಸುವುದು ಯುಕ್ತತೆಯ ಅಂಶವಾಗುತ್ತದೆ".*

*7. ಈ ಮೊಕದ್ದಮೆಯಲ್ಲಿ ಪ್ರತ್ಯರ್ಜಿದಾರನು 14 ವರ್ಷಗಳ ಮುಕ್ತಾಯವನ್ನು ಪ್ರಶ್ನಿಸಲು ಇಚ್ಛಿಸಿಲ್ಲ. ಕೆಲ ಇತರ ದಿನಗೂಲಿ ಕಾರ್ಮಿಕರು ಸ್ವಲ್ಪ ಪರಿಹಾರವನ್ನು ಪಡೆದಿದ್ದಾರೆಂಬ ಕಾರಣ ಮಾತ್ರದಿಂದ ಆತನು 1998ರಲ್ಲಿ ವಿಳಂಬವಾಗಿ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದಾನೆ.*

*8. ಪರಾಮರ್ಶನವನ್ನು ಕೋರಿ ಅರ್ಜಿ ಸಲ್ಲಿಸುವ ಸ್ವಾತಂತ್ರ್ಯವಿದೆಯೆಂಬ ಅಭಿಪ್ರಾಯದೊಂದಿಗೆ, ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ. ಆದುದರಿಂದ, ಉಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ಪರಾಮರ್ಶನ ಮಾಡಲಾಯಿತೆಂಬ ಪ್ರತ್ಯರ್ಜಿದಾರನ ವಾದವು ಸರಿಯಲ್ಲ. ಪರಾಮರ್ಶನವು ಅವಧಿ ಮೀರಿ ಹೋಗಿದ್ದ ಕಾರಣ, ಅದೊಂದೇ ಆಧಾರದ ಮೇಲೆ ಅದನ್ನು ತಿರಸ್ಕರಿಸಬೇಕಾಯಿತು.*

*9. ದಿನಗೂಲಿ ನೌಕರನು ಕೆಲಸ ಮಾಡಿಲ್ಲವೆಂದು ಅಥವಾ ಅವನು ವರ್ಷದಲ್ಲಿ 240 ದಿನಗಳು ಕೆಲಸ ಮಾಡಿಲ್ಲವೆಂದು ಅಥವಾ ದಿನಗೂಲಿ ನೌಕರನು ಸ್ವ-ಇಚ್ಛೆಯಿಂದ ಕೆಲಸ ಬಿಟ್ಟನೆಂದು 14 ವರ್ಷಗಳ ನಂತರ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರು ಸಾಬೀತುಪಡಿಸಬೇಕೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ, ರಾಜ್ಯ ಸರ್ಕಾರವು ಕಾರ್ಮಿಕ ನ್ಯಾಯಾಲಯದ ಮುಂದೆ ಪಕ್ಷಕಾರನಾಗಿಲ್ಲದಿದ್ದಾಗ, ಪ್ರತ್ಯರ್ಜಿದಾರನು, ಐತೀರ್ಪನ್ನು ಪ್ರಶ್ನಿಸುವ ರಿಟ್ ಅರ್ಜಿಯಲ್ಲಿ ರಾಜ್ಯ ಸರ್ಕಾರವನ್ನು ಪಕ್ಷಕಾರನ್ನಾಗಿ ಸೇರಿಸಲಾಗದು ಅಥವಾ ಉಚ್ಚ ನ್ಯಾಯಾಲಯವು ರಾಜ್ಯ ಸರ್ಕಾರದ ವಿರುದ್ಧ ಯಾವುದೇ ಪರಿಹಾರವನ್ನು ನೀಡಲಾಗದು.*

*10. ಆದುದರಿಂದ, ನಾವು, ಈ ಅಪೀಲನ್ನು ಪುರಸ್ಕರಿಸುತ್ತೇವೆ ಮತ್ತು ಉಚ್ಚ ನ್ಯಾಯಾಲಯದ ಪ್ರಶ್ನಿತ ಆದೇಶವನ್ನು ಬದಿಗಿರಿಸುತ್ತೇವೆ ಹಾಗೂ ಬೇರೆ ಬೇರೆ ಆಧಾರಗಳಿದ್ದರೂ, ಕಾರ್ಮಿಕ ನ್ಯಾಯಾಲಯವು ಹೊರಡಿಸಿದ ವಜಾ ಆದೇಶವನ್ನು ಪೂರ್ವಸ್ಥಿತಿಗೆ ತರುತ್ತೇವೆ.”*

13. ನ್ಯಾಯಾಧಿಕರಣವು ಪ್ರಕರಣವನ್ನು ಗುಣಾರ್ಹತೆಗಳ ಆಧಾರದ ಮೇಲೆ ಪರಿಗಣಿಸಿಲ್ಲವೆಂದು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಕಾರ್ಮಿಕನು ತನ್ನ ಸಾಕ್ಷ್ಯದಲ್ಲಾಗಲೀ ಅಥವಾ ತನ್ನ ಕ್ಲೇಮು ಹೇಳಿಕೆಯಲ್ಲಾಗಲೀ, ವಿವಾದವನ್ನು ಮಂಡಿಸಲು ಒಂಬತ್ತು ವರ್ಷಗಳಿಗಿಂತ ಹೆಚ್ಚು ಕಾಲ ವಿಳಂಬಕ್ಕೆ ಕಾರಣವೇನೆಂಬ ಬಗ್ಗೆ ಏನನ್ನೂ ಹೇಳಿಲ್ಲ ಅಥವಾ ತನ್ನ ಕಡೆಯಿಂದ ಯಾವುದೇ ವಿಳಂಬವಾಗಿಲ್ಲವೆಂದು ತೋರಿಸುವ ಯಾವ ದಾಖಲೆಯನ್ನೂ ಹಾಜರುಪಡಿಸಿಲ್ಲವೆಂಬ ಸಂಗತಿಯು ಉಳಿದಿರುತ್ತದೆ. ಅಧಿನಿಯಮದ 10(1)(2ಇ) ಪ್ರಕರಣದಡಿ ಅಧಿಕಾರಗಳನ್ನು ಚಲಾಯಿಸಲು ಸಮುಚಿತ ಸರ್ಕಾರಕ್ಕೆ ಕಾನೂನು ಯಾವುದೇ ಪರಿಮಿತಿಯನ್ನು ನಿಗದಿಪಡಿಸಿರದಿದ್ದರೂ, ಅಧಿಕಾರವನ್ನು ಯಾವ ಸಮಯದಲ್ಲಿ ಬೇಕಾದರೂ ಚಲಾಯಿಸಬಹುದು ಎಂದರ್ಥವಲ್ಲ ಎಂಬುದು ಸಹ ವಿವಾದದಲ್ಲಿಲ್ಲ. 'ಅಧಿನಿಯಮ'ದ 10(1)(ಡಿ) ಪ್ರಕರಣದಲ್ಲಿ ಬಳಸಲಾದ “ಯಾವುದೇ ಸಮಯದಲ್ಲಿ”

ಎಂಬ ಪದಗಳಿಗೆ ಅಧಿನಿಯಮದಡಿಯಲ್ಲಿನ ವ್ಯವಹರಣೆಗಳಿಗೆ ಕಾಲ ಪರಿಮಿತಿಯ ಕಾನೂನು ಅನ್ವಯಿಸುವುದಿಲ್ಲ ಎಂದರ್ಥವಲ್ಲ. ಹಾಗಿದ್ದರೂ, ವಿಳಂಬಕ್ಕೆ ತೃಪ್ತಿಕರವಾದ ವಿವರಣೆ ಇದ್ದ ಹೊರತು, ಬಹಳ ಅವಧಿ ಮೀರಿದ ಕ್ಲೇಮುಗಳನ್ನು ಸಾಮಾನ್ಯವಾಗಿ ಪ್ರೋತ್ಸಾಹಿಸತಕ್ಕದ್ದಲ್ಲ ಅಥವಾ ಪುರಸ್ಕರಿಸತಕ್ಕದ್ದಲ್ಲ. ಸದ್ಯದ ಪ್ರಕರಣದಲ್ಲಿ ನ್ಯಾಯಾಧಿಕರಣವು ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ಕಾರ್ಮಿಕನು ತನ್ನ ಕ್ಲೇಮು ಹೇಳಿಕೆಯಲ್ಲಿ ಅಥವಾ ಸಾಕ್ಷ್ಯದಲ್ಲಿ ವಿಳಂಬ ಕುರಿತಂತೆ ಏನನ್ನೂ ಹೇಳಿಲ್ಲವೆಂದು ನಿರ್ದಿಷ್ಟವಾದ ನಿರ್ಣಯವನ್ನು ದಾಖಲಿಸಿದೆ. ಅಂಥ ಹೇಳಿಕೆ ಅಥವಾ ಸಾಕ್ಷ್ಯ ಇಲ್ಲದಿರುವುದರಿಂದ ನ್ಯಾಯಾಧಿಕರಣವು ಪರಾಮರ್ಶನವನ್ನು ತಿರಸ್ಕರಿಸಲು ಸಮರ್ಥವಾಗಿದೆ.

14. ಗೌರವಾನ್ವಿತ ಸರ್ವೋಚ್ಚ, ನ್ಯಾಯಾಲಯವು ವರದಿಯಾದ ***ಪ್ರಭಾಕರ್ -ವಿರುದ್ಧ- ಜಂಟಿ ನಿರ್ದೇಶಕರು, ರೇಷ್ಮೆ ಇಲಾಖೆ ಹಾಗೂ ಇನ್ನೊಬ್ಬರು***[3], ಪ್ರಕರಣದಲ್ಲಿ 'ಅಧಿನಿಯಮ'ದ 10(1)(ಡಿ) ಪ್ರಕರಣದ ಉಪಬಂಧಗಳನ್ನು ಪರಿಗಣಿಸುವಾಗ ಈ ಕೆಳಗಿನಂತೆ ತೀರ್ಮಾನಿಸಿದೆ:

> *"42.1 ಕೈಗಾರಿಕಾ ವಿವಾದವನ್ನು ನ್ಯಾಯ ನಿರ್ಣಯ ಮಾಡಲು ಸಮುಚಿತ ಸರ್ಕಾರವು ಪರಾಮರ್ಶಿಸಬೇಕಾಗುತ್ತದೆ ಮತ್ತು ಅಧಿನಿಯಮದ 2-ಎ ಪ್ರಕರಣದಲ್ಲಿ ಒಳಗೊಳ್ಳುವಂಥ ಮೊಕದ್ದಮೆಗಳಲ್ಲಿ ಹೊರತುಪಡಿಸಿ, ಉಳಿದಂತೆ ಕಾರ್ಮಿಕನು ನೇರವಾಗಿ ಕಾರ್ಮಿಕ ನ್ಯಾಯಾಲಯದ ಅಥವಾ ಕೈಗಾರಿಕಾ ನ್ಯಾಯಾಧಿಕರಣದ ಮೊರೆ ಹೋಗುವಂತಿಲ್ಲ. 'ಯಾವುದೇ ಕೈಗಾರಿಕಾ ವಿವಾದ ಅಸ್ತಿತ್ವದಲ್ಲಿರುತ್ತದೆ ಅಥವಾ ಹಾಗೆಂದು ನಿರೀಕ್ಷಿಸಲಾಗಿದೆ' ಎಂಬುದಾಗಿ ಸಮುಚಿತ ಸರ್ಕಾರವು ಅಭಿಪ್ರಾಯವನ್ನು ರೂಪಿಸುವಂಥ ಪ್ರಕರಣಗಳಲ್ಲಿ ಅಧಿನಿಯಮದ 10ನೇ ಪ್ರಕರಣದಡಿ ಉಲ್ಲೇಖವನ್ನು ಮಾಡಿದೆ. "ಕೈಗಾರಿಕಾ ವಿವಾದ ಅಸ್ತಿತ್ವದಲ್ಲಿರುತ್ತದೆ" ಎಂಬ*

3. (2015) 15 ಎಸ್‌ಸಿಸಿ 1

*ಪದಗಳು ಅತ್ಯಂತ ಮುಖ್ಯವಾದುವಾಗಿದ್ದು, ಕೈಗಾರಿಕಾ ವಿವಾದದ ಅಸ್ತಿತ್ವವಿದ್ದ ಹೊರತು (ಅಥವಾ ವಿವಾದವನ್ನು ನಿರೀಕ್ಷಿಸಿದ ಅಥವಾ ನಿಕಟ ಭವಿಷ್ಯದಲ್ಲಿ ಅಂಥ ವಿವಾದವು ಉದ್ಭವಿಸಬಹುದೆಂದು ನಿರೀಕ್ಷಿಸಲಾದ) ಯಾವುದೇ ಉಲ್ಲೇಖವನ್ನು ಮಾಡಬೇಕಿಲ್ಲ. ಹೀಗಾಗಿ, ಕೈಗಾರಿಕಾ ವಿವಾದದ ಅಸ್ತಿತ್ವ ಅಥವಾ ನಿರೀಕ್ಷೆಯು ಪರಾಮರ್ಶನ ಮಾಡಲು ಅತ್ಯಗತ್ಯವಾಗಿದೆ. ಪರಾಮರ್ಶನವನ್ನು ಮಾಡಬೇಕೆ? ಅಥವಾ ಬೇಡವೇ ಎಂಬ ನಿರ್ಧಾರವನ್ನು ತೆಗೆದುಕೊಳ್ಳುವ ಸಮಯದಲ್ಲಿ ಸಮುಚಿತ ಸರ್ಕಾರವು ವಿವಾದದ ಗುಣಾರ್ಹತೆ ಪರಿಶೀಲಿಸುವುದಿಲ್ಲ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಪರಾಮರ್ಶಿಸುವುದು ಆಡಳಿತಾತ್ಮಕವಾದ ಕರ್ತವ್ಯವಷ್ಟೇ ಆಗಿದೆ. ಅದೇ ಸಮಯದಲ್ಲಿ, ದಾಖಲೆಯಲ್ಲಿನ ಸಾಕ್ಷ್ಯಾಧಾರಗಳ ಆಧಾರದ ಮೇಲೆ, ಕೈಗಾರಿಕಾ ವಿವಾದದ ಅಸ್ತಿತ್ವದ ಅಥವಾ ಕೈಗಾರಿಕಾ ವಿವಾದದ ನಿರೀಕ್ಷೆಯ ಮನವರಿಕೆ ಮಾಡಿಕೊಡುವುದು ಅಗತ್ಯವಾಗಿದೆ. ಹೀಗಾಗಿ, ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಅದು ಬರೀ ವಸ್ತುನಿಷ್ಠ ಸಮಾಧಾನವಾಗಿರುತ್ತದಾದರೂ ಅದು ಪೂರ್ವ ಷರತ್ತಿನದಾಗುತ್ತದೆ. ನಿರೀಕ್ಷಿತ ಕೈಗಾರಿಕಾ ವಿವಾದವಿದ್ದಂಥ ಮೊಕದ್ದಮೆಗಳೊಂದಿಗೆ ವ್ಯವಹರಿಸುವ ಸಮಾಧಾನವು ನಮಗೆ ಸಂಬಂಧಪಡುವುದಿಲ್ಲವಾದ್ದರಿಂದ ಆ ನಂತರದ ಚರ್ಚೆಯು ಕೈಗಾರಿಕಾ ವಿವಾದ ಉಂಟಾಗುವುದಕ್ಕೆ ಸೀಮಿತವಾಗುತ್ತದೆ.*

*42.2 ಒಬ್ಬ ಪಕ್ಷಕಾರ ಒಂದು ಬೇಡಿಕೆಯಿಟ್ಟಾಗ ಮತ್ತು ಇನ್ನೊಬ್ಬ ಪಕ್ಷಕಾರ ಅದನ್ನು ತಿರಸ್ಕರಿಸಿದಾಗ ವಿವಾದ ಅಥವಾ ಭಿನ್ನಾಭಿಪ್ರಾಯ ತಲೆದೋರುತ್ತದೆ. ಕೈಗಾರಿಕಾ ವಿವಾದವನ್ನು ಮಂಡಿಸುವುದಕ್ಕೆ ಮುಂಚೆ ಬೇಡಿಕೆ ಇಡುವುದು ಅವಶ್ಯಕ ಪೂರ್ವ ಷರತ್ತಾಗಿದೆಯೆಂದು ಅನೇಕ ಪ್ರಕರಣಗಳಲ್ಲಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಇಂಥ ಸನ್ನಿವೇಶದಲ್ಲಿ ಕಾರ್ಮಿಕನ ಸೇವೆಗಳನ್ನು ಕೊನೆಗೊಳಿಸಿದಲ್ಲಿ ಮತ್ತು ಅವನು ಯಾವುದೇ ಬೇಡಿಕೆಯನ್ನು*

*ಮುಂದಿಡದಿದ್ದಲ್ಲಿ ಮತ್ತು/ಅಥವಾ ಅದರ ನಿಕಟ ತರುವಾಯದಲ್ಲಿ ಅಥವಾ ಯುಕ್ತ ಸಮಯದಲ್ಲಿ ದೋಷಪೂರ್ಣ ಸಮಾಪನವನ್ನು ಆಪಾದಿಸಿ, ವಿವಾದವನ್ನು ಮುಂದಿಡದಿದ್ದಲ್ಲಿ ಹಾಗೂ ಗಣನೀಯ ಕಾಲಾವಧಿಯು ಕಳೆದುಹೋದ ನಂತರ ವಿವಾದವನ್ನು ಮಂಡಿಸಿದಲ್ಲಿ, ಕೈಗಾರಿಕಾ ವಿವಾದವು ಇನ್ನೂ ಅಸ್ತಿತ್ವದಲ್ಲಿದೆಯೆಂದು ಹೇಳಲಾಗುವುದೆ?*

*42.3. ಕಾಲ ಪರಿಮಿತಿ ಅವಧಿಯು ಇಲ್ಲವಾದ್ದರಿಂದ ಅದು ಕಾರ್ಮಿಕನಿಗೆ ತಡವಾಗಿಯಾದರೂ ವಿವಾದವನ್ನು ಮುಂದಿಡುವ ಹಕ್ಕನ್ನು ನೀಡುತ್ತದೆ. ಹಾಗಿದ್ದರೂ ದೀರ್ಘಾವಧಿಯ ನಂತರ ವಿವಾದವನ್ನು ಮಂಡಿಸಿದಲ್ಲಿ, ಅಂಥ ವಿವಾದವು ಇನ್ನೂ ಪ್ರಸ್ತುತದಲ್ಲಿದೆಯೇ? ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಹೀಗಾಗಿ, ಕಾಲ ಪರಿಮಿತಿಯ ಕಾನೂನು ಅನ್ವಯಿಸುವುದಿಲ್ಲವೆಂಬ ಸಂಗತಿ ಏನೇ ಆದರೂ, ವಿವಾದ ಮುಂದೆಯೂ ಪ್ರಸ್ತುತವಾಗಿರುತ್ತದೆಯೆಂಬುದನ್ನು ಕಾರ್ಮಿಕನು ತೋರಿಸ ಬೇಕಿರುತ್ತದೆ. ಈ ಉದ್ದೇಶಕ್ಕಾಗಿ, ಅವನು ಗಣನೀಯ ಕಾಲಾವಧಿಯು ಗತಿಸಿಹೋಗಿದ್ದರೂ ಮತ್ತು ಕರ್ತವ್ಯಲೋಪಗಳು ಹಾಗೂ ವಿಳಂಬಗಳಾಗಿದ್ದರೂ, ಅಂಥ ವಿಳಂಬವು ಕೈಗಾರಿಕಾ ವಿವಾದವು ಅಸ್ತಿತ್ವದಲ್ಲಿರುವುದು ನಿಂತುಹೋಗುವಂತೆ ಮಾಡಲಾಗುವುದಿಲ್ಲವೆಂಬುದನ್ನು ತೋರಿಸಬೇಕಾಗುತ್ತದೆ. ಆದುದರಿಂದ ಕಾರ್ಮಿಕನು ಈ ಕರ್ತವ್ಯಲೋಪಗಳಿಗೆ ಮತ್ತು ವಿಳಂಬಗಳಿಗೆ ತೃಪ್ತಿಕರ ವಿವರಣೆ ನೀಡಲು ಹಾಗೂ ಸನ್ನಿವೇಶಗಳು ವಿವಾದ ಇನ್ನೂ ಜೀವಂತವಾಗಿದೆಯೆಂದು ಬಹಿರಂಗಪಡಿಸುತ್ತವೆ ಎಂಬುದನ್ನು ತೋರಿಸಲು ಸಾಧ್ಯವಾದಲ್ಲಿ ಕಾಲ ಪರಿಮಿತಿಯ ಕಾನೂನು ಅನ್ವಯವಾಗುವುದಿಲ್ಲವೆಂಬ ಕಾರಣಕ್ಕೆ, ವಿಳಂಬವು ಅವನ ದಾರಿಗೆ ಅಡ್ಡಿಯಾಗುವುದಿಲ್ಲ. ಇನ್ನೊಂದು ಕಡೆಯಲ್ಲಿ, ಅಂಥ ವಿಳಂಬದ ಕಾರಣದಿಂದ ವಿವಾದವು ಹೆಚ್ಚು ಕಾಲ ಜೀವಂತವಾಗಿ*

*ಉಳಿಯುದಿದ್ದಲ್ಲಿ ಮತ್ತು ಅದನ್ನು ''ಇಲ್ಲ'' ವೆಂದು ಪರಿಗಣಿಸಬೇಕಿದ್ದಲ್ಲಿ, ಅದು ಪರಾಮರ್ಶಿಸಲಾಗದ ಅಪ್ರಸ್ತುತ ವಿವಾದವಾಗುತ್ತದೆ.*

*42.4. ಉದಾಹರಣೆಗೆ, ಕಾರ್ಮಿಕನು ತನ್ನನ್ನು ಸೇವೆಯಿಂದ ತೆಗೆದುಹಾಕಿದ ನಂತರ ಅದನ್ನು ಪ್ರಶ್ನಿಸಿ ಮತ್ತು ಪುನಃ ಸೇವೆಗೆ ಸೇರಿಸಿಕೊಳ್ಳಲು ಬೇಡಿಕೆಯೊಂದಿಗೆ ನೋಟೀಸನ್ನು ನೀಡಿರುತ್ತಾನೆ. ಕಾಲಕಾಲಕ್ಕೆ ಚರ್ಚೆಗಳು ನಡೆದಿರುವುದನ್ನು ಮತ್ತು ಪಕ್ಷಕಾರರು ಸಮಸ್ಯೆಯನ್ನು ಸೌಹಾರ್ದಯುತವಾಗಿ ಪರಿಹರಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದನ್ನು ತೋರಿಸಲು ಸಮರ್ಥನಾಗಿರುತ್ತಾನೆ. ಅಥವಾ ಅವನನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಗುವುದು ಎಂಬ ಮಟ್ಟಿಗೆ ಆಡಳಿತವರ್ಗವು ಭರವಸೆಗಳನ್ನು ನೀಡಿದ್ದು, ಈ ಕಾರಣಗಳಿಂದಾಗಿ ಅವನು ಕೂಡಲೇ ಪರಾಮರ್ಶನವನ್ನು ಕೋರಿ, ಕಾರ್ಮಿಕ ಅಧಿಕಾರಿಗಳ ಮೊರೆ ಹೋಗಿ, ವಿವಾದವನ್ನು ಮಂಡಿಸಿರುವುದಿಲ್ಲ ಅಥವಾ ಅಧಿನಿಯಮದ 2–ಎ ಪ್ರಕರಣದಡಿ ಪರಿಹಾರವನ್ನು ಕೋರಿರುವುದಿಲ್ಲ ಎಂಬುದನ್ನು ತೋರಿಸಲು ಸಮರ್ಥನಾಗಿರುತ್ತಾನೆ. ಇಂಥ ಸನ್ನಿವೇಶದಲ್ಲಿ, ವಿವಾದವು ಜೀವಂತವಾಗಿರುತ್ತದೆ ಮತ್ತು ಕಾರ್ಮಿಕನು ತನ್ನ ಹಕ್ಕನ್ನು ಎಂದಿಗೂ ಕಳೆದುಕೊಂಡಿರುವುದಿಲ್ಲ ಎಂದು ಪರಿಗಣಿಸಲಾಗುವುದು. ಹಾಗಿದ್ದರೂ, ಅದೇ ಉದಾಹರಣೆಯಲ್ಲಿ, ಬೇಡಿಕೆಯ ನೋಟೀಸನ್ನು ಕಳುಹಿಸಿದ್ದರೂ, ಅದು ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆಯನ್ನು ಉಂಟು ಮಾಡಿಲ್ಲ ಅಥವಾ ನೋಟೀಸಿನಲ್ಲಿ ಒಳಗೊಂಡ ಅವನ ಬೇಡಿಕೆಯನ್ನು ನಿರ್ದಿಷ್ಟವಾಗಿ ತಿರಸ್ಕರಿಸಲಾಗಿದೆ ಹಾಗೂ ಆ ನಂತರ ಅವನು ಅನೇಕ ವರ್ಷಗಳ ಕಾಲ ಸುಮ್ಮನಿದ್ದುಬಿಟ್ಟಿರುತ್ತಾನೆ, ಅದನ್ನು, ಅವನು ತನ್ನನ್ನು ಸೇವೆಯಿಂದ ತೆಗೆದುಹಾಕಿದ್ದನ್ನು ಮತ್ತು ಆಡಳಿತ ವರ್ಗ ಅವನ ಬೇಡಿಕೆಯನ್ನು ತಿರಸ್ಕರಿಸಿರುವುದನ್ನು*

*ಒಪ್ಪಿಕೊಂಡಿದ್ದಾನೆಂದು ಹಾಗೂ ಸದರಿ ತಿರಸ್ಕರಣೆಗೆ ಮೌನಸಮ್ಮತಿ ನೀಡಿದ್ದಾನೆಂದು ಪರಿಗಣಿಸಬಹುದಾಗಿದೆ.*

*42.5. ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಒಬ್ಬ ಕಾರ್ಮಿಕನು ಹಲವಾರು ವರ್ಷಗಳಿಂದ ಇತ್ಯರ್ಥದಲ್ಲಿದ್ದ, ಸೇವೆಯಿಂದ ತನ್ನನ್ನು ತೆಗೆದುಹಾಕಿದ್ದರ ವಿರುದ್ಧ ದಾವೆ ಹೂಡಿ, ಸಿವಿಲ್ ನ್ಯಾಯಾಲಯದ ಮೊರೆ ಹೋಗಿರುತ್ತಾನೆ ಮತ್ತು ಅಂತಿಮವಾಗಿ, ವೈಯಕ್ತಿಕ ಸೇವಾ ಕರಾರನ್ನು ಜಾರಿಗೆ ತರಲು ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯಿಲ್ಲವೆಂಬ ಆಧಾರದ ಮೇಲೆ ಅವನನ್ನು ವಜಾಗೊಳಿಸಲಾಯಿತು ಹಾಗೂ ಪುನ: ಕೆಲಸಕ್ಕೆ ಸೇರಿಕೊಳ್ಳುವ ಯಾವುದೇ ಅವಕಾಶ ನೀಡಲಿಲ್ಲ. ಆ ಹಂತದಲ್ಲಿ, ದಾವೆಯನ್ನು ವಜಾ ಮಾಡಿದಾಗ ಅಥವಾ ಅವನು ದಾವೆಯನ್ನು ಹಿಂಪಡೆದಾಗ ಮತ್ತು ನಂತರ ಅಧಿನಿಯಮದಡಿ ಸಾಧನೋಪಾಯಗಳು ಒಳಗೊಂಡಾಗ, ಕಾರ್ಮಿಕನು ತನ್ನನ್ನು ಕೆಲಸದಿಂದ ತೆಗೆದುಹಾಕಿದ್ದನ್ನು ಒಪ್ಪಿಕೊಂಡಿಲ್ಲ. ಯುಕ್ತವಲ್ಲದ ನ್ಯಾಯಾಧಿಕರಣದ ಮೊರೆ ಹೋಗಿದ್ದರೂ ಕೂಡ ವಾದ ಪ್ರಕ್ರಿಯೆಗೆ ಒಳಪಡಿಸಿದ್ದು, ಸದರಿ ವಿವಾದವು ಇನ್ನೂ ಪ್ರಸ್ತುತವಾಗಿದೆಯೆಂದು ತೀರ್ಮಾನಿಸಲಾಯಿತು.*

*42.6. ಇದಕ್ಕೆ ವಿರುದ್ಧವಾಗಿ, ಕಾರ್ಮಿಕನು ತನ್ನನ್ನು ಕೆಲಸದಿಂದ ತೆಗೆದುಹಾಕಿದ್ದರ ವಿರುದ್ಧ ಯಾವುದೇ ವಾದ ಮಾಡಿರದಿದ್ದಂಥ ಮತ್ತು ತಡವಾಗಿ ವಿವಾದವನ್ನು ಮಂಡಿಸಿದ್ದ ಪ್ರಕರಣಗಳಲ್ಲಿ ಹಾಗೂ ವಿಳಂಬ ಅಥವಾ ಕರ್ತವ್ಯ ಲೋಪಗಳನ್ನು ವಿವರಿಸದೆ ಉಳಿದಿದ್ದಾಗ, ಅವನು ತನ್ನ ಹಕ್ಕನ್ನು ಬಿಟ್ಟುಕೊಟ್ಟಿದ್ದಾನೆ ಅಥವಾ ಕೆಲಸದಿಂದ ತೆಗೆದುಹಾಕಿದ ಕ್ರಮಕ್ಕೆ ಮೌನಸಮ್ಮತಿ ನೀಡಿದ್ದಾನೆ ಹಾಗೂ ಆ ಕಾರಣಕ್ಕಾಗಿ, ವಿವಾದವನ್ನು ಮಂಡಿಸಿದಾಗ ಅದು ಅವಧಿ ಮೀರಿದ್ದಾಗಿತ್ತು ಹಾಗೂ ಅದು 'ಅಸ್ತಿತ್ವದಲ್ಲಿರುವ ವಿವಾದ'*

*ವಾಗಿರಲಿಲ್ಲ. ಅಂಥ ಸನ್ನಿವೇಶಗಳಲ್ಲಿ ಸಮುಚಿತ ಸರ್ಕಾರವು ಪರಾಮರ್ಶನ ಮಾಡಲು ತಿರಸ್ಕರಿಸಬಹುದು. ಅದಕ್ಕೆ ಪರ್ಯಾಯವಾಗಿ, ಕಾರ್ಮಿಕ ನ್ಯಾಯಾಲಯ/ಕೈಗಾರಿಕಾ ನ್ಯಾಯಾಲಯವು, ಅಧಿನಿಯಮದ 2(ಕೆ) ಪ್ರಕರಣದ ಅರ್ಥವ್ಯಾಪ್ತಿಯಲ್ಲಿ "ಕೈಗಾರಿಕಾ ವಿವಾದ" ಎಂಬುದು ಇಲ್ಲ. ಆದುದರಿಂದ, ಯಾವುದೇ ಪರಿಹಾರವನ್ನು ನೀಡಲಾಗುವುದಿಲ್ಲ ಎಂದು ತೀರ್ಮಾನಿಸಿದೆ".*

15. ಮೇಲಿನದರ ದೃಷ್ಟಿಯಿಂದ, ಸದ್ಯದ ರಿಟ್ ಅರ್ಜಿಯಲ್ಲಿ ಎತ್ತಲಾದ ಪ್ರಶ್ನೆಗೆ ವಿವಾದವನ್ನು ಮಂಡಿಸುವಲ್ಲಿ ಒಂಬತ್ತು ವರ್ಷಗಳ ಅತಿಯಾದ ವಿಳಂಬದ ಆಧಾರದ ಮೇಲೆ ಪರಾಮರ್ಶನವನ್ನು ತಿರಸ್ಕರಿಸುವಲ್ಲಿ ನ್ಯಾಯಾಧಿಕರಣವು ಸಮರ್ಥಿತವಾಗಿದೆಯೆಂದು ನಿರ್ಧರಿಸಿ ನಕಾರಾತ್ಮಕವಾಗಿ ಉತ್ತರಿಸಬೇಕಿದೆ.

16. ಮೇಲೆ ಹೇಳಲಾದ ಕಾರಣಗಳಿಗಾಗಿ, ಉಲ್ಲೇಖ ಸಂಖ್ಯೆ, 127/2005ರಲ್ಲಿ ಮೈಸೂರಿನ ಕೈಗಾರಿಕಾ ನ್ಯಾಯಾಧಿಕರಣವು ದಿನಾಂಕ 28.02.2013ರಂದು ಹೊರಡಿಸಿದ ಪ್ರಶ್ನಿತ ಐತೀರ್ಪು ಕಾನೂನಿಗೆ ಅನುಸಾರವಾಗಿದೆ ಮತ್ತು ಭಾರತದ ಸಂವಿಧಾನದ ಅನುಚ್ಛೇದ 226 ಹಾಗೂ 227ರಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವಲ್ಲಿ, ನ್ಯಾಯಾಧಿಕರಣದಿಂದ ಹೊರಡಿಸಲಾದ ಪ್ರಶ್ನಿತ ಐತೀರ್ಪಿಗೆ ಅರ್ಜಿದಾರನು ಯಾವುದೇ ರೀತಿಯಲ್ಲಿ ಅಡ್ಡಿಪಡಿಸಿಲ್ಲ. ತದನುಸಾರವಾಗಿ, ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.